

ಕಟ್ಟೆಯ ಮೇಲೆ ದೇಸಾಯರು ವಿಷಣ್ಣರಾಗಿ ಕೂತಿದ್ದರು.

ಅಂಗಳದಲ್ಲಿ ಬೆಳೆದುನಿಂತ ಹೂವಿನ ಗಿಡಗಳು ಬಾಡಿ ಬಾಗಿದ್ದನ್ನು ಅವರಿಂದ ನೋಡಲಾಗಲಿಲ್ಲ. ನೀರು ಹಾಕೋಣವೆಂದರೆ ಅಷ್ಟೆಲ್ಲ ನೀರು ಎಲ್ಲಿದೆ? ಪ್ರಖರ ಬಿಸಿಲಿಗೆ ಗಾಳಿ ಕುಡಿಯುತ್ತ ತಿಂಗಳೇ ಆಗಿಹೋಗಿದೆ. ನೆಲಬಿರಿದು ದೂಳು ಹಾರುತ್ತಿದೆ. ಇರುವೆಗಳು ಸಾಲಾಗಿ ನೀರು ಹುಡುಕಿಕೊಂಡು ಅಡಿಗೆಮನೆಗೆ ದಾಳಿ ಇಟ್ಟಿರುವುದನ್ನು ನಿರುಪಾಯರಾಗಿ ನಿಂತು ನೋಡಬೇಕಾಗಿದೆ.

ನೂರು ವರ್ಷಗಳಿಗೂ ಹಿಂದೆ ತಮ್ಮ ಹಿರಿಯರು ನೀರಿಗಾಗಿ ತೋಡಿಸಿದ ಬಾವಿ ಈಗ ಬರಡು. 'ಕಲ್ಲು ಮಣ್ಣು ಹಾಕಿಸಿ ಮುಚ್ಚಿ ಒಂದು ರೂಮು ಕಟ್ಟಿಸಿಬಿಡು' ಎಂಬ ಸಲಹೆ ಸುಬ್ಬಣ್ಣನಿಂದ ಬಂದು ವರ್ಷವಾಯಿತು. ಇನ್ನು ಮುನಿಸಿ ಪಾಲಿಟಿಯ ನಲ್ಲಿಯಲ್ಲಿ ಬರೋದು ಬರೀ ಗಾಳಿ! ತಮಗೇ ನೀರಿಗೆ ಹಾಹಾಕಾರವಾಗಿರುವಾಗ ಇನ್ನು ಗಿಡಗಳಿಗೆಲ್ಲಿ? ಗ್ರಹಚಾರವೆಂದರೆ ಇದೇ ಇರಬೇಕು, ಈ ಕಡೆ ಹಾಳಾದ ಮಳೇನೂ ಬರ್ತಾ ಇಲ್ಲ. ಆ ಕಡೆ ದೂರವಿರುವ ಮಗನೂ ತಮ್ಮನ್ನು ಮರೆತಂತೆ ಕಾಣುತ್ತಿದೆ.

ದೇಸಾಯರು ನೀರಸವಾಗಿ ಒಂದು ನಿಟ್ಟುಸಿರುಬಿಟ್ಟರು. ತಮ್ಮ ಬದುಕಿನಲ್ಲಿ ಈ ರೀತಿ ವಿಧಿಯ ನಿಷ್ಕರುಣೆಯನ್ನು ಎದುರಿಸಬೇಕಾಗಿ ಬರಬಹುದು ಎಂದವರು ಎಣಿಸಿರಲಿಲ್ಲ. ಏನು ಮಾಡೋದು, ಎಂಟು ತಿಂಗಳಿಂದ ಮಗ ದೂರವಾದ ಸಂತಾಪವೇ ಇನ್ನೂ ಮುಗಿಯದಿರುವಾಗ ಈಗ ಮಳೆ ಸಹ ಬಾರದೆ ಬದುಕಿನಲ್ಲಿ ಎಷ್ಟೊಂದು ಹಾಹಾಕಾರ! ಈ ಕಾಯುವ ಕೆಲಸವಿದೆಯಲ್ಲ, ಇದಕ್ಕಿಂತ ಶೋಚನೀಯವಾದದ್ದು ಮತ್ತೊಂದು ಇರಲಾರದು.